ದಿನಾಂಕಃ 01-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಎದುರುದಾರರ ಪರವಾಗಿ ಶ್ರೀಮತಿ ಜೆ.ಬಿ.ರವರ ಪರ ಶ್ರೀ.ಎಸ್.ವೈ. ವಕೀಲರಿಂದಃ-**

ನಾನು ದ್ವಿತಿಯ ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ದ್ವಿದ.ಸ. ಆಗಿ ಕೆಲಸ ಮಾಡುತ್ತಿದ್ದರು. ಈ ಬಗ್ಗೆ ನನ್ನ ಗಂಡನ ವೇತನ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಗಂಡ ಮೃತ ಪಟ್ಟ ನಂತರ ನನಗೆ ಸರ್ಕಾರದಿಂದ ಅನುಕಂಪದ ನೌಕರಿ ನೀಡಿರುತ್ತಾರೆ. ಈ ಅಪಘಾತವು ದಿನಾಂಕಃ 20-05-2023 ರ ಸಂಜೆ 5.00 ಗಂಟೆಗೆ ಆಗಿರುತ್ತದೆ. ಅಪಘಾತವಾದ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿದ್ದೆನು. ಸಾದರಹಳ್ಳಿ ಗೇಟ್ ಬಳಿ ಒಂದು ಬಸ್ ಸ್ಟಾಫ್ ನಿರ್ಮಿಸಲಾಗಿದೆ ಎಂದರೆ ಸರಿ. ಆ ಕೆ.ಎಸ್.ಆರ್.ಟಿ.ಸಿ. ಬಸ್ ಪ್ರತಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿ ಜನರನ್ನು ಹತ್ತಿಸಿಕೊಂಡು ಹೋಗುವ ಬಸ್ ಆಗಿತ್ತು. ಆ ದಿನ ಆ ಬಸ್ ಸಾದರಹಳ್ಳಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿ ಹೋಗುತ್ತಿತ್ತು ಎಂದರೆ ಸರಿಯಲ್ಲ. ನಾನು ಉದ್ದೇಶಪೂರಕವಾಗಿ ಆ ಸ್ಥಳದ ಸ್ಕೆಚ್ ಮತ್ತು ಸ್ಥಳ ಪಂಚನಾಮೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ನನ್ನ ಗಂಡನಿಗೂ ಸುಮಾರು 12 ವರ್ಷ ವಯಸ್ಸಿನ ಅಂತರವಿದೆ ಎಂದರೆ ಸರಿಯಲ್ಲ.

ಸಾಕ್ಷಿಯು ಕೇವಲ 5 ವರ್ಷಗಳ ಅಂತರವಿದೆ ಎಂದು ಸ್ವತಃ ನುಡಿಯುತ್ತಾರೆ.

ಅಪಘಾತವಾದಾಗ ನನ್ನ ಗಂಡನಿಗೆ 48 ವರ್ಷವಾಗಿತ್ತು ಎಂದರೆ ಸರಿಯಲ್ಲ. ನನ್ನ ಮಾವನಿಗೆ ಇಬ್ಬರು ಹೆಂಡತಿಯರಿದ್ದು ಆತನ ಯೋಗ ಕ್ಷೇಮವನ್ನು 2 ನೇ ಹೆಂಡತಿಯ ಮಕ್ಕಳುಗಳು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಗಂಡನೇ ನೋಡಿಕೊಳ್ಳುತ್ತಿದ್ದರು ಎಂದು ಸ್ವತಃ ನುಡಿಯುತ್ತಾರೆ. ಅಪಘಾತವಾದ ನಂತರ ನನ್ನ ಗಂಡನನ್ನು ಮಧುಗಿರಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ಅಪಘಾತ ವಿಚಾರವನ್ನು ವೈದ್ಯರಿಗೆ ತಿಳಿಸಿ ಎಂ.ಎಲ್.ಸಿ. ಯಲ್ಲಿ ಬರೆಸಿರುತ್ತೇನೆ. ಆ ಎಂ.ಎಲ್.ಸಿ.ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ಕಾರಿ ಆಸ್ಪತ್ರೆ ಮಧುಗಿರಿಯಿಂದ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ನನ್ನ ಭಾವನ ಮಗ ದೂರು ಕೊಟ್ಟಿರುತ್ತಾನೆ.

ಆ ದಿನ ಬೈಕನ್ನು ನನ್ನ ಗಂಡ ಚಲಾಯಿಸುತ್ತಿದ್ದರು. ಆ ಬೈಕ್ ಚಲಾಯಿಸಲು ನನ್ನ ಗಂಡನಿಗೆ ಚಾಲನಾ ಪರವಾನಗಿ ಇದೆ. ನನ್ನ ಗಂಡನಿಗೆ ಡಿ.ಎಲ್. ಇರಲಿಲ್ಲ, ಎಲ್.ಎಲ್.ಆರ್. ಇತ್ತು ಎಂದರೆ ಸರಿ. ನನ್ನ ಗಂಡನಿಗೆ ಬೈಕ್ ಚಲಾಯಿಸಲು ಬರದೇ ಇರುವ ಕಾರಣ ಆತನೇ ಕೆಳಗಡೆ ಬಿದ್ದು ಗಾಯಪಡಿಸಿಕೊಂಡಿದ್ದಾರೆ ಎಂದರೆ

ಸರಿಯಲ್ಲ. ನನ್ನ ಗಂಡನಿಗೆ ರಕ್ತದೊತ್ತಡ ಮತ್ತು ಮಧುಮೇಹ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ನನ್ನ ಗಂಡನ ತಪ್ಪಿನಿಂದ ಈ ಅಪಘಾತವಾಗಿರುವುದರಿಂದ ತಡವಾಗಿ ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮೂರಿನಿಂದ ಮಿಡಿಗೇಶಿ ಪೊಲೀಸ್ ಠಾಣೆ 15 ಕಿ.ಮೀ. ದೂರದಲ್ಲಿದೆ. ಅದೇ ರೀತಿ ನಮ್ಮೂರಿನಿಂದ ಮಧುಗಿರಿ 24 ಕಿ.ಮೀ. ದೂರದಲ್ಲಿದೆ. ಅದೇ ದಿನ ದೂರು ಕೊಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಅಂತ್ಯ ಸಂಸ್ಕಾರಕ್ಕೆ ರೂ.1 ಲಕ್ಷ ಮತ್ತು ಮೃತ ದೇಹ ಸಾಗಿಸಲು 15 ಸಾವಿರ ಖರ್ಚು ಮಾಡಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಮಿಡಿಗೇಶಿ ಪೊಲೀಸರ ಜೊತೆ ಹೊಂದಾಣಿಕೆ ಮಾಡಿಕೊಂಡು ಎದುರುದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ